ಸಿ.ಸಿ. ನಂಃ 126/2017 ಪಿ.ಡಬ್ಲ್ಯೂ. 1

ದಿನಾಂಕಃ 01.07.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿಯ ಪರ ಶ್ರೀ ಬಿ.ಎಮ್.ಜೆ. ವಕೀಲರಿಂದಃ

ಆರೋಪಿಯ ತಂದೆಯ ಹೆಸರು ಕೃಷ್ಣೇಗೌಡ ಹಾಗೂ ತಾಯಿಯ ಹೆಸರು ಪ್ರೇಮಮ್ಮ ಆಗಿರುತ್ತದೆ. ಆರೋಪಿಯ ತಾಯಿ ಪ್ರೇಮಮ್ಮ ಎನ್ನುವವರು ಕೆ.ಆರ್.ಪೇಟೆಯಲ್ಲಿ ಹಲವಾರು ಜನರಿಗೆ ಸಾಲ ನೀಡಿರುತ್ತಾರೆ ಹಾಗೂ ಸಾಲವನ್ನು ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಹಣವನ್ನು ಆರೋಪಿಯ ಕೈಗೆ ನೀಡಿರುತ್ತೇನೆ. ಆರೋಪಿಯ ವಯಸ್ಸು ನನಗೆ ಗೊತ್ತಿರುವುದಿಲ್ಲ. ಆರೋಪಿಗೆ ಹಣವನ್ನು ನೀಡುವ ಸಂದರ್ಭದಲ್ಲಿ ಆರೋಪಿಯು ಅಲ್ಪವಯಸ್ಕರಾಗಿದ್ದರು ಎಂದರೆ ಗೊತ್ತಿಲ್ಲ.

ನನಗೆ ಮನೆ ಬಾಡಿಗೆಯಿಂದ ಆದಾಯ ಬರುತ್ತದೆ, ಜಮೀನು ಹಾಗೂ ತೋಟದಿಂದ ಆದಾಯ ಬರುತ್ತದೆ. ಸದರಿ ವಿಚಾರವಾಗಿ ನ್ಯಾಯಾಲಯಕ್ಕೆ ಆರ್.ಟಿ.ಸಿಯನ್ನು ಹಾಜರು ಮಾಡಿರುತ್ತೇನೆ. ನಾನು ಚೀಟಿ ವ್ಯವಹಾರವನ್ನು ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚೀಟಿ ವ್ಯವಹಾರ ಮಾಡುತ್ತಿದ್ದು, ಹಲವಾರು ಜನರಿಗೆ ಮೋಸ ಮಾಡಿರುತ್ತೇನೆ ಎಂದು ಸಾಕ್ಷಿ ಹೇಳಿಸಲು ಕರೆಸಿದರೆ ನನಗೆ ಯಾವುದೇ ತಕರಾರು ಇರುವುದಿಲ್ಲ.

ನಾನು ಮಾರ್ಚ್ ಮೊದಲನೇ ವಾರ 2015 ರಲ್ಲಿ ಆರೋಪಿಗೆ ಹಣವನ್ನು ನೀಡಿದ್ದು, ದಿನಾಂಕ ನೆನಪಿರುವುದಿಲ್ಲ. ಹಣವನ್ನು ನೀಡುವ ಸಂದರ್ಭದಲ್ಲಿ ನಾನು, ಆರೋಪಿ ಹಾಗೂ ಮಂಜು ಎನ್ನುವವರು ಇದ್ದೇವು. ಆರೋಪಿಗೆ 2 ಲಕ್ಷದ 90 ಸಾವಿರ ಹಣವನ್ನು ನೀಡಿರುತ್ತೇನೆ. ಸದರಿ ಹಣವನ್ನು ಒಂದೇ ಬಾರಿಗೆ ಆರೋಪಿಗೆ ನೀಡಿರುತ್ತೇನೆ. ಮನೆಯಲ್ಲಿಯೇ ಇಟ್ಟಿದ್ದ ಹಣವನ್ನು ಆರೋಪಿಗೆ ನೀಡಿರುತ್ತೇನೆ. ಆರೋಪಿ ಹಣವನ್ನು ಪಡೆದುಕೊಂಡು ದಿನವೇ ನನಗೆ ಚೆಕ್ ನೀಡಿರುತ್ತಾರೆ. 2015 ನೇ ಇಸವಿಯಲ್ಲಿ ಚೆಕ್ ನೀಡಿರುತ್ತಾರೆ ಎಂದರೆ ಸರಿ.

2014-15 ರ ಇಸವಿಯಲ್ಲಿ ನಾನು ಒಂದು ಕೊಲೆ ಪ್ರಕರಣದಲ್ಲಿ ಸಿಲುಕಿದ್ದು, ಬಹಳ ಸಾಲ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹೆಂಡತಿಯ ಕೊಲೆಯ ವಿಚಾರವಾಗಿ ನ್ಯಾಯ ಪಂಚಾಯಿತಿ ಮಾಡಿ ನನ್ನಿಂದ 30 ಲಕ್ಷ ರೂ.ಗಳನ್ನು ವಸೂಲಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಯಾವುದೇ

ಹಣವನ್ನು ನಾನು ನೀಡಿರುವುದಿಲ್ಲ. ಅವರ ಮನೆಯ ಕಡೆಯವರು ಬಂದು ಸಾಕ್ಷಿ ಹೇಳಿದರೆ ನನಗೆ ಯಾವುದೇ ತಕರಾರು ಇರುವುದಿಲ್ಲ.

ಆರೋಪಿಗೆ 2 ಲಕ್ಷದ 90 ಸಾವಿರವನ್ನು ಒಂದೇ ಬಾರಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಅಮಾಯಕರ ಜೊತೆ ಸೇರಿ ಚೀಟಿ ವ್ಯವಹಾರ ಮಾಡುತ್ತಿದ್ದೇ ಎಂದರೆ ಸರಿಯಲ್ಲ. ನಾನು ಚೀಟಿ ವ್ಯವಹಾರ ಮಾಡಲು ಜಾಗವನ್ನು ನೀಡಿದವರು ಹಾಗೂ ನನ್ನ ಜೊತೆ ಚೀಟಿ ವ್ಯವಹಾರ ಮಾಡಿದವರು ಬಂದು ನ್ಯಾಯಾಲಯದ ಮುಂದೆ ಸಾಕ್ಷಿ ಹೇಳಿದರೆ ನನಗೆ ಯಾವುದೇ ತಕರಾರು ಇರುವುದಿಲ್ಲ.

ಮರು ವಿಚಾರಣೆಃ ಸಮಯ ನೀಡಿ ಮುಂದೂಡಲಾಯಿತು.

**(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಸಾ ಓ ಹೇ ಕೇ ಸ ಅದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.
ದಂಡಾಧಿಕಾರಿಗಳು, ಕೃಷ್ಣರಾಜಪೇಟೆ